

ಪರಿಸರ ಜಾಗೃತಿಗೆ ಪುಸ್ತಕ
ಹಂಚುತ್ತಿರುವ ಮಾನ್ಯ




ಸಂಬಂಧಿಸಿದಂತೆ ಅವರು ಹೇಳಿದ ಅನೇಕ ಕಥೆಗಳು ಈಗಲೂ ನೆನಪಿನಲ್ಲಿವೆ. ನನಗೆ ನಾಲ್ಕು ವರ್ಷ ಇದ್ದಾಗ ನನ್ನ ಅಜ್ಜಿ ಜೊತೆ ಗಿಡವನ್ನು ಮೊದಲ ಬಾರಿಗೆ ನೆಟ್ಟಿದ್ದೆ. ಅದು ನನ್ನ ಮೊದಲ ಕೆಲಸ. 2018ರಲ್ಲಿ 'ವಾಟರ್ ವಾಕಥಾನ್' ಮೂಲಕ ಪರಿಸರ ಕಾರ್ಯಕರ್ತೆಯಾಗಿ ಕೆಲಸ ಆರಂಭವಾಯಿತು. ಸಮಯ ಸಿಕ್ಕಾಗೆಲ್ಲ ಪ್ರವಾಸ ಮಾಡುತ್ತೇನೆ. ನನ್ನ ಪ್ರವಾಸದ ಅವಲೋಕನದಲ್ಲಿಯೇ ಪರಿಸರದ ಭಿನ್ನ ಮುಖಗಳನ್ನು ಕಂಡಿದ್ದೇನೆ. ಹಚ್ಚಹಸುರಿನ ಶುದ್ಧ ಪರಿಸರ, ಮಲಿನಗೊಂಡ ಹವಾಮಾನ, ಕೊಳಚೆ, ಸರೋವರ ಹೀಗೆ... ಇಂತಹ ನಿಗೂಢ ಜಗತ್ತಿನಲ್ಲಿ ಏನಾದರೂ ಮಾಡಬೇಕೆನ್ನುವ ಯೋಚನೆ ಬಂತು.

◆ **ಅಪ್ಪ–ಅಮ್ಮ ಏನು ಹೇಳುತ್ತಾರೆ?**

ಅಪ್ಪ, ಹರ್ಷ ಬಿ.ಎಸ್. ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ಅಮ್ಮ, ಚಿತ್ರಶ್ರೀ ಹರ್ಷ ಗೃಹಿಣಿ. ಇಬ್ಬರೂ ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಅಜ್ಜಿ ನನಗೆ ಹಣಕಾಸಿನ ನೆರವು ನೀಡುತ್ತಿದ್ದರು. ನನಗೆ ಅನೇಕ ಪುಸ್ತಕಗಳನ್ನು ಕೊಡಿಸಿದ್ದಾರೆ. ಗಿಡಗಳನ್ನು ನೆಡುವ ಹವ್ಯಾಸದ ಬೀಜವನ್ನು ಬಿತ್ತಿದವರೂ ಅವರೇ.

◆ **'ಒಂದಾನೊಂದು ಕಾಲದಲ್ಲಿ' (2020 ಲಾಕ್‌ಡೌನ್ ನೆನಪುಗಳು) ನಿಮ್ಮ ಕನ್ನಡ ಕೃತಿ. ಅದರ ವೈಶಿಷ್ಟ್ಯ ಏನು?**

ಲಾಕ್‌ಡೌನ್ ಅವಧಿ ಪರಿಸರದಲ್ಲಿ ದೊಡ್ಡ ಬದಲಾವಣೆ ಆಗಿದೆ. ಬೆಂಗಳೂರಿನಲ್ಲಿಯೂ ಅಪರೂಪದ ಪಕ್ಷಿಗಳನ್ನು ನೋಡಲು ಸಾಧ್ಯವಾಯಿತು. ಆ ಸಮಯದಲ್ಲಿ ಮನುಷ್ಯನ ಹಸ್ತಕ್ಷೇಪ ಇಲ್ಲದೆ ಏನೆಲ್ಲ ಬದಲಾವಣೆ ನಿಸರ್ಗದಲ್ಲಿ ಆಗಿದೆ. ಮಕ್ಕಳಾದ ನಾವು ಏನೆಲ್ಲ ಮಾಡಿದ್ದೇವೆ. ಆ ಹೊತ್ತಿನಲ್ಲಿ ವೈದ್ಯರು ಮತ್ತು ಪೊಲೀಸರ ಸಮಸ್ಯೆಗಳು ಏನಿದ್ದವು ಅನ್ನುವುದನ್ನು ಮಕ್ಕಳ ಕಣ್ಣಲ್ಲಿ ನೋಡುವ ಪ್ರಯತ್ನ ಮಾಡಿದ್ದೇನೆ. ಆಗ ಶುದ್ಧ ಗಾಳಿ ಸೋಕಿದ ಅನುಭವ ಆಗಿದೆ. ಆಕಾಶದಲ್ಲಿ ಅಸಂಖ್ಯ ಹಕ್ಕಿಗಳ ಚಿಲಿಪಿಲಿ ಹಾಡನ್ನು ಕೇಳಿದ್ದೇನೆ. ಆ ದಿನಗಳಲ್ಲಿ ಪರಿಸರದ ಬಗ್ಗೆ ಬರೆಯಲು ಸ್ಫೂರ್ತಿ ಸಿಕ್ಕಾ ಇತ್ತು.

◆ **'ಪರಿಸರ ಯೋಧರು' ಕೃತಿಗೆ 'ವಯಸ್ಸು ಕೇವಲ ಸಂಖ್ಯೆ ಅಷ್ಟೇ' ಎಂಬ ಟ್ಯಾಗ್‌ಲೈನ್ ಕೊಟ್ಟಿದ್ದು ಏಕೆ?**

ಈ ಕೃತಿಯಲ್ಲಿ ಮೂರು ಪಾತ್ರಗಳು ಇವೆ. 9 ವರ್ಷದ ನನ್ನಂತಹ ಒಂದು ಮಗು, ಮಧ್ಯವಯಸ್ಸಿನ ಪುರುಷ ಮತ್ತು 70 ವರ್ಷದ ಅಜ್ಜಿ ಬರುತ್ತಾರೆ. ಈ ಮೂರು ಪಾತ್ರಗಳು ಮೂರು ತಲೆಮಾರಿನ ಸಂಕೇತವೂ ಹೌದು.

ಈ ವಯೋಮಾನ ಅಂತರದಲ್ಲಿ ಪರಿಸರಕ್ಕೆ ಏನೆಲ್ಲ ಮಾಡಬಹುದು ಎನ್ನುವುದು ಇದರ ಹೂರಣ. ಯಾವುದೇ ಕೆಲಸ ಮಾಡಲು ಮನಸ್ಸು ಮುಖ್ಯ. ಕ್ರಿಯಾಶೀಲ ಮನಸ್ಸಿದ್ದರೆ ವಯಸ್ಸು ಯಾವ ರೀತಿಯಲ್ಲೂ ಅಡ್ಡಿಯಾಗುವುದಿಲ್ಲ. 9 ವರ್ಷದ ಮಗು, 80 ವರ್ಷದ ವಯೋವೃದ್ಧ ಇಬ್ಬರಿಗೂ ಯಾವ ಅಂತರವೂ ಇರುವುದಿಲ್ಲ. ನಮ್ಮಲ್ಲಿ ಒಂದು ಧೋರಣೆ, ಆದರ್ಶ ಇದ್ದರೆ ಖಂಡಿತ ಏನಾದರೂ ಮಾಡಬಹುದು ಎನ್ನುವ ಕಾರಣಕ್ಕೆ ಅದನ್ನು ಕೊಟ್ಟಿದ್ದು.

◆ **ನಿಮ್ಮ ಆಸೆ ಏನು? ಈಗ ನಿಮ್ಮ ಪರಿಸರ ಕೆಲಸದ ಸ್ವರೂಪ ಹೇಗಿದೆ?**

ಇವತ್ತು ನಾನು ಪರಿಸರವಾದಿ. ಅದೇ ನನ್ನ ಮುಂದಿನ ಹವ್ಯಾಸವೂ ಆಗಿರುತ್ತದೆ. ಸಾಫ್ಟ್‌ವೇರ್ ಎಂಜಿನಿಯರ್ ಆಗುವುದು ನನ್ನ ಕನಸು. ಸ್ವಾತ್ರಂತ್ಯ ದಿನಾಚರಣೆಯ ನೆಪದಲ್ಲಿ ಆಯ್ದ ಕೆಲವು ಸರ್ಕಾರಿ ಶಾಲೆ, ಆಸ್ಪತ್ರೆ, ಪೊಲೀಸ್ ಠಾಣೆಗಳಲ್ಲಿ ನನ್ನ ಪುಸ್ತಕಗಳನ್ನು ಹಂಚಿದ್ದೇನೆ. 77ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ 77 ಗಿಡಗಳನ್ನು ಹಂಚಿದ್ದೇನೆ. ನಾಲ್ಕಾರು ವರ್ಷಗಳಿಂದ ಈ ಕೆಲಸ ಮಾಡುತ್ತಿದ್ದೇನೆ.

◆ **ಬೀದಿಯಲ್ಲಿ ಕಸ ಗುಡಿಸಲು ಸ್ಫೂರ್ತಿ ಏನು?**

ನನ್ನ ಅಜ್ಜಿ ಪರಿಸರದ ಕುರಿತು ಕಥೆಗಳನ್ನು ಹೆಚ್ಚು ಹೇಳುತ್ತಿದ್ದರು. ಅವರು ಮರ ಗಿಡಗಳ ಪೋಷಣೆ ಮತ್ತು ಮರಗಳನ್ನು ಪೂಜಿಸುತ್ತಿದ್ದ ಕಾರಣಗಳ ಬಗ್ಗೆ ವಿವರಿಸುತ್ತಿದ್ದರು. ಅವರು ಅನೇಕ ಮಹನೀಯರ ವ್ಯಕ್ತಿತ್ವಗಳನ್ನೂ ಪರಿಚಯಿಸಿದ್ದಾರೆ. ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಸುಭಾಷ್ ಚಂದ್ರ ಬೋಸ್, ಅಬ್ದುಲ್ ಕಲಾಂ ಅವರು ನನ್ನ ಪಾಲಿನ ಸ್ಫೂರ್ತಿಯ ಚಿಲುಮೆಗಳು. ಅವರು ಪರಿವರ್ತನೆ ತಮ್ಮಿಂದ ಸಾಧ್ಯ ಎನ್ನುವುದನ್ನು ನಂಬುತ್ತಿದ್ದರು.

'**Arise awake and stop not till the goal is reached**' ಎಂಬ ಸ್ವಾಮಿ ವಿವೇಕಾನಂದರ ಘೋಷವಾಕ್ಯದಂತೆ, ಗುರಿಮುಟ್ಟುವ ತನಕ ಜಾಗೃತವಾಗಿರಬೇಕು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ನನ್ನ ಪರಿಸರ ಯಾನ ಪ್ರಾರಂಭಿಸಿದೆ. ನನಗೆ ಸುಧಾಮೂರ್ತಿಯವರ ಕಥೆಗಳು ಇಷ್ಟ. ಅವರ ಬರವಣಿಗೆ ಶೈಲಿ, ಭಾಷಾ ಸಂಪತ್ತು. ನಮಗೆ ಕಥೆಯನ್ನು ಅನ್ವಯಿಸಿ ಹೇಳುವ ಕಲೆ ತುಂಬ ಇಷ್ಟ.

◆ **ಪ್ರಶಸ್ತಿ ಬಂದ ನಂತರ ನಿಮ್ಮ ಫ್ರೆಂಡ್ಸ್ ಏನು ಹೇಳುತ್ತಾರೆ?**

ಅವರು ಖುಷಿಯಾಗಿದ್ದಾರೆ. ನನ್ನನ್ನು ಅಭಿನಂದಿಸಿದ್ದಾರೆ. ಕೆಲವರು ನನ್ನನ್ನು ಅನುಕರಿಸುತ್ತಿದ್ದಾರೆ. ಶಾಲೆಯ ಆವರಣದಲ್ಲಿ ಗಿಡಗಳಿಗೆ ನೀರುಣಿಸುತ್ತಾರೆ. ಅವರಿಗೂ ನೀರಿನ ಸಂರಕ್ಷಣೆ ಬಗ್ಗೆ ಕಾಳಜಿ ಬಂದಿದೆ.

ಪ್ರತಿಕ್ರಿಯಿಸಿ: **feedback@sudha.co.in**